ದಿಃ01.04.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಚಾಸಾ.6 ಸುಮಾರು 10 ವರ್ಷಗಳಿಂದ ಗೊತ್ತು. ಚಾಸಾ.6 ರವರ ಅಜ್ಜಿ ಮತ್ತು ತಾತ ಸಂತೆಮೊಗೇನಹಳ್ಳಿ ಗ್ರಾಮದವರು. ಅವರು ಮೃತಪಟ್ಟು ಎಷ್ಟು ವರ್ಷಗಳಾಗಿವೆ ಎಂದು ಗೊತ್ತಿಲ್ಲ. ನಾನು ಮೊದಲು ಅವರನ್ನು ಸುಮಾರು 10 ವರ್ಷದ ಹಿಂದೆ ಸಂತೆಮೊಗೇನಹಳ್ಳಿಯಲ್ಲಿ ನೋಡಿದ್ದೆ. ಅವರು ಅವರ ಅಜ್ಜಿ ತಾತನ ಮನೆಗೆ ಬಂದಿದ್ದಾಗ ನೋಡಿರುತ್ತೇನೆ. ಚಾಸಾ.6 ರವರು ಅವರ ಅಜ್ಜಿ ತಾತ ಮೃತಪಟ್ಟ ನಂತರ ಸುಮಾರು 18 ವರ್ಷಗಳಿಂದ ಊರಿಗೆ ಹೋಗಿಲ್ಲ ಎಂದು ಹೇಳುತ್ತಾರೆ ಎಂದರೆ ಬರುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

2. ನನಗೆ ಇಬ್ಬರು ಹೆಣ್ಣು ಮಕ್ಕಳು, ಮೂರು ಗಂಡು ಮಕ್ಕಳು ಇರುತ್ತಾರೆ. ನನ್ನ ಅಣ್ಣ ಶಿವಕುಮಾರ್ ಇರುತ್ತಾರೆ. ಜಯಲಕ್ಷ್ಮಿ ನನ್ನ ಸ್ವಂತ ಅಕ್ಕ. ಚಾಸಾ.6 ರವರ ತಂದೆಯ ಹೆಸರು ಗೊತ್ತಿಲ್ಲ. ಅವರು ಜೀವಂತವಿರುವ ಬಗ್ಗೆ ನನಗೆ ಗೊತ್ತಿಲ್ಲ. ಅವರ ತಾಯಿಯ ಹೆಸರು ನೆನಪಿಲ್ಲ. ಚಾಸಾ.6 ರವರ ತಾಯಿ ಜೀವಂತವಿರುತ್ತಾರೆ.

3. ನಾನು ಜಯಲಕ್ಷ್ಮಿರವರ ಮನೆಗೆ ವಾರಕ್ಕೊಮ್ಮೆ ಹೋಗುತ್ತೇನೆ. ಚಾಸಾ.6 ರವರ ಮನೆಯ ಮುಂದೆ ಸಂತೆಮೊಗೇನಹಳ್ಳಿಯಲ್ಲಿ ರಾಮಯ್ಯನವರ ಮನೆ ಮತ್ತು ಅಕ್ಕಪಕ್ಕ

ಈಶ್ವರಯ್ಯ ಮತ್ತು ಮುತ್ತಯ್ಯರವರ ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ.6 ರವರ ತಂದೆಯ ಮನೆಯ ರಸ್ತೆಯಲ್ಲಿ ಜಯಲಕ್ಷ್ಮಿರವರ ಮನೆ ಇಲ್ಲ ಎನ್ನುವುದು ಸರಿ.

4. ಚಾಸಾ.6 ರವರ ಪತಿಯ ಹೆಸರು ಚುಂಚಯ್ಯ. ಅವರು ಮದುವೆಯಾದ ನಂತರ ಪರಿಚಯವಾಗಿರುತ್ತಾರೆ. ನಾನು ಅವರ ಮನೆಗೆ ಹೋಗುತ್ತಿದ್ದೆ. ಅವರು ನನ್ನೊಂದಿಗೆ ಅನ್ಯೋನ್ಯವಾಗಿದ್ದರು. ಅವರು ಮನೆಯಲ್ಲಿ ಯಾವ ದೇವರನ್ನು ಪೂಜಿಸುತ್ತಾರೆಂದು ನಾನು ನೋಡಿಲ್ಲ. ಅವರಿಗೆ ಎಷ್ಟು ಜನ ಮಕ್ಕಳು ಮತ್ತು ಏನು ಓದುತ್ತಿದ್ದಾರೆಂದು ಗೊತ್ತಿಲ್ಲ.

5. ಶಿವಕುಮಾರ್ ಮನೆ ಮತ್ತು ಚಾಸಾ.6 ರವರ ಮನೆ ರಸ್ತೆಯ ಅಕ್ಕಪಕ್ಕದಲ್ಲಿ ಇರುತ್ತವೆ. ನಾನು ಚಾಸಾ.6 ರವರ ಮನೆಗೆ ಹೋದಾಗ ನನ್ನನ್ನು ಯಾವುದೇ ದಿನದಂದು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗುವಂತೆ ಕೇಳಿಲ್ಲ ಎನ್ನುವುದು ಸರಿ.

6. ಚಾಸಾ.1 ರವಿಕುಮಾರ್‌ರವರನ್ನು ನಾನು ನೋಡಿಲ್ಲ. ಚಾಸಾ.6 ರವರೇ ಚಾಸಾ.1 ರವರ ಬಗ್ಗೆ ಸುಮಾರು 2 ವರ್ಷದ ಹಿಂದೆ ಹೇಳಿರುತ್ತಾರೆ. ನಾನು ಈ ವಿಷಯವನ್ನು 1 ನೇ ಆರೋಪಿಗೆ 2-3 ದಿನಗಳಾದ ಮೇಲೆ ಹೇಳಿದೆ. ಆಗ ನಾನು ಮತ್ತು 1 ನೇ ಆರೋಪಿ ಸೇರಿ ಯಾವುದೇ ದೂರು ನೀಡುವ ಪ್ರಯತ್ನ ಮಾಡಲಿಲ್ಲ. ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ ಎನ್ನುವುದು ಸರಿ.

7. ನಾನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವನಲ್ಲ. 1 ನೇ ಆರೋಪಿ ಯಾವ ಪಕ್ಷದ ಕಾರ್ಯಕರ್ತ ಎಂದು ಗೊತ್ತಿಲ್ಲ.

8. ಚಾಸಾ.6 ರವರು ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತನೆಗೊಂಡಿರುವ ಬಗ್ಗೆ ನಾನು ಯಾವುದೇ ದಾಖಲೆ ನೋಡಿಲ್ಲ ಎನ್ನುವುದು ಸರಿ. ಆದರೆ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರ್ಪಡೆಗೊಂಡಿರುತ್ತಾರೆಂದು ಗೊತ್ತು.

9. ನನಗೆ ಚಾಸಾ.6 ಯಾರು ಎಂದು ಗೊತ್ತಿಲ್ಲ ಮತ್ತು ಅವರಿಗೂ ನನ್ನ ಬಗ್ಗೆ ಗೊತ್ತಿಲ್ಲವಾದರೂ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ.1 ರವರ ಹೆಸರೂ ಸಹ 1 ನೇ ಆರೋಪಿಯ ಮೂಲಕ ತಿಳಿದಿರುತ್ತದೆ ಎನ್ನುವುದು ಸರಿಯಲ್ಲ. ಚಾಸಾ.6 ರವರು ಯಾವುದೇ ದಿನದಂದು ನನಗೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗುವಂತೆ ಕೇಳಿಲ್ಲ ಮತ್ತು ಒತ್ತಾಯಿಸಿಲ್ಲ ಎನ್ನುವುದು ಸರಿಯಲ್ಲ. ಚಾಸಾ.6 ರವರ ಜೊತೆ ಇದ್ದ ಇತರೆ 3 ಜನ ವ್ಯಕ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ.

10. ನಮ್ಮ ಊರಿನಲ್ಲಿ ಬೇರೆ ಯಾರಿಗಾದರೂ ಮತಾಂತರವಾಗುವಂತೆ ಪ್ರಚೋದನೆ ನೀಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸಾಕ್ಷಿ ನುಡಿಯುವಂತೆ ಯಾವುದೇ ಘಟನೆ ನಡೆಯದಿದ್ದರೂ ಆರೋಪಿಗಳ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.